ಎ-72-(81)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಅ. ದೇವೇಗೌಡ ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

ವಿಷಯ:-

ಬಿ.ಬಿ.ಎಂ.ಪಿ.ಯು ಪ್ರಾರಂಭಿಸಿರುವ ನಾಲ್ಕು ಪ್ರಥಮ ದರ್ಜೆ ಕಾಲೇಜುಗಳು ಸುಸಜ್ಜಿತವಾದ ಕಟ್ಟಡವನ್ನು ಹೊಂದಿದ್ದು, ವಿದ್ಯಾರ್ಥಿಗಳ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳಿಗಿಂತ ಫಲಿತಾಂಶವು ಉತ್ತಮಗೊಳ್ಳುತ್ತಿದೆ. ಇದಕ್ಕೆ ಕಾರಣವಾದ ಉಪನ್ಯಾಸಕರ ಪರಿಸ್ಥಿತಿ ಶೋಚನೀಯವಾಗಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಲಭ್ಯವನ್ನು ಕೊಟ್ಟು ಬೋಧನೆ ಮಾಡುವವರನ್ನು ಸಂಕಷ್ಟಕ್ಕೆ ದೂಡಿರುವುದು ಅತ್ಯಂತ ದುರಕೃಷ್ಟಕರ ಸಂಗತಿ. ಡಾಕ್ಟರೇಟ್, ಎನ್.ಇ.ಟಿ., ಕೆ.ಎಸ್.ಇ.ಟಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಪಾಸಾದ ಉಪನ್ಯಾಸಕರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ಅತ್ಯಂತ ಕಡಿಮೆ ವೇತನವನ್ನು 3 ತಿಂಗಳಿನಿಂದ 4 ತಿಂಗಳಿಗೊಮ್ಮೆ ಒಂದು ತಿಂಗಳಿನ ವೇತನವನ್ನು ನೀಡಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಸ್ಥಳೀಯ ವಿಚಾರಣಾ ಸಮಿತಿಯು ಕಾಲೇಜುಗಳಿಗೆ ಭೇಟಿ ಕೊಟ್ಟು, ಪದವಿ ಉಪನ್ಯಾಸಕರನ್ನು ಪೌರಕಾರ್ಮಿಕರಂತೆ ನೋಡುತ್ತಿರುವುದಲ್ಲದೇ ಸಮಾನ ಕೆಲಸಕ್ಕೆ ಸಮಾನ ವೇತನ ನಿಗಧಿ ಮಾಡಿರುವುದಕ್ಕೆ ಬಿ.ಬಿ.ಎಂ.ಪಿ. ಯವರಿಗೆ ಶೋಭೆ ತರುವಂತದಲ್ಲ ಎಂದು ಆಕ್ಷೇಪಿಸಿದರೂ ಬಿ.ಬಿ.ಎಂ.ಪಿ. ಅದರ ಬಗ್ಗೆ ಗಮನಹರಿಸಿಲ್ಲ. ಆದ್ದರಿಂದ, ಅರ್ಹತೆ ಇರುವವರಿಗೆ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ದೊರಕಿಸಿಕೊಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯಬಯಸುತ್ತೇನೆ.

ಉತ್ತರ:-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪದವಿ ಕಾಲೇಜುಗಳ ಮಾಹಿತಿಯು ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ | ಪದವಿ ಕಾಲೇಜುಗಳ ಹೆಸರು ಮತ್ತು ವಿಳಾಸ | ಕಾರ್ಯನಿರ್ವಹಿಸುತ್ತಿರುವ ಖಾಯಂ ಉಪನ್ಯಾಸಕರ ವಿವರ | ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಉಪನ್ಯಾಸಕರ ವಿವರ |
|---|---|---|---|
| 1 | ಬಿಬಿಎಂಪಿ ಪದವಿ ಕಾಲೇಜು, ಮಾಗಡಿ ರಸ್ತೆ, 1ನೇ ಕ್ರಾಸ್, ಮಾಗಡಿ ರಸ್ತೆ, ಬೆಂಗಳೂರು-560023 | 01 (ಪ್ರಾಂಶುಪಾಲರು) | 9 |
| 2 | ಬಿಬಿಎಂಪಿ ಪದವಿ ಕಾಲೇಜು, ಕಸ್ತೂರ್ ಬಾ ನಗರ, ಅಜಾದ್ ನಗರ ಪ್ಲೈಓವರ್ ಹತ್ತಿರ, ಕಾರ್ಪೋರೇಷನ್ ಹೆರಿಗೆ ಆಸ್ಪತ್ರೆ, ಮೈಸೂರು ರಸ್ತೆ, ಬೆಂಗಳೂರು-560046 | 01 (ಪ್ರಾಂಶುಪಾಲರು) | 11 |
| 3 | ಬಿಬಿಎಂಪಿ ಪದವಿ ಕಾಲೇಜು, ಕ್ಲೀವ್‌ಲ್ಯಾಂಡ್‌ಟೌನ್, ಅಶೋಕ ಟಾಕೀಸ್ ಹತ್ತಿರ, ಫ್ರೇಜರ್ ಟೌನ್, ಬೆಂಗಳೂರು-560005 | 01 (ಪ್ರಾಂಶುಪಾಲರು) | 18 |
| 4 | ಬಿಬಿಎಂಪಿ ಪದವಿ ಕಾಲೇಜು, ಭೈರವೇಶ್ವರ ನಗರ ಬೆಂಗಳೂರು | 01 (ಪ್ರಾಂಶುಪಾಲರು) | 19 |
| | ಒಟ್ಟು | 04 | 57 |

- ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಉಪನ್ಯಾಸಕರಿಗೆ ಸೆಪ್ಟಂಬರ್ 2019 ರಲ್ಲಿ ವೇತನ ಪರಿಷ್ಕರಿಸಿದ್ದು, ಅದರಂತೆ ಪ್ರತಿ ಮಾಹೆ 27,897/- ರೂಗಳನ್ನು ವೇತನವಾಗಿ ಪಾವತಿಸಲಾಗುತ್ತಿದೆ. ಸರ್ಕಾರದ ಕಾಲೇಜು ಶಿಕ್ಷಣ ಇಲಾಖೆಯು ಅತಿಥಿ ಉಪನ್ಯಾಸಕರಿಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯಾದ Phd, NET/SLET – ಹೊಂದಿರುವ ಅಭ್ಯರ್ಥಿಗಳಿಗೆ ವಾರಕ್ಕೆ 8 ಘಂಟೆ ಅವಧಿಗೆ 13,000/- ರೂಗಳನ್ನು ಹಾಗೂ P.G, M.phil. ಪದವಿ ಪಡೆದ ಅಭ್ಯರ್ಥಿಗಳಿಗೆ 11,500/- ರೂಗಳನ್ನು ನೀಡಲಾಗುತ್ತದೆ.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪದವಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಉಪನ್ಯಾಸಕರಿಗೆ ಏಪ್ರಿಲ್ 2020ರ ಅವಧಿವರೆಗೆ ವೇತನ ಪಾವತಿ ಮಾಡಲಾಗಿರುತ್ತದೆ.

- ಕೋವಿಡ್-19 ಸಮಸ್ಯೆಯ ಹಿನ್ನೆಲೆಯಲ್ಲಿ ಇದುವರೆವಿಗೂ ಶಾಲಾ/ಕಾಲೇಜುಗಳು ತೆರೆಯದೆ ಮುಚ್ಚಲ್ಪಟ್ಟಿರುವುದರಿಂದ ಏಪ್ರಿಲ್ ಮಾಹೆಯಿಂದ ವೇತನ ಪಾವತಿ ಮಾಡಲಾಗಿರುವುದಿಲ್ಲ.

  ಸೆಪ್ಟೆಂಬರ್ 1, 2020 ರಿಂದ ಪದವಿ ಕಾಲೇಜಿನ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ತರಗತಿಗಳು ಪ್ರಾರಂಭವಾಗಿದ್ದು, ಎಲ್ಲಾ 4 ಪದವಿ ಕಾಲೇಜುಗಳ ಉಪನ್ಯಾಸಕರು ಆನ್‌ಲೈನ್ ತರಗತಿಗಳನ್ನು ನಡೆಸುತ್ತಿದ್ದಾರೆ. ಸದರಿ ಹೊರಗುತ್ತಿಗೆ ಉಪನ್ಯಾಸಕರಿಗೆ ಸರ್ಕಾರದ ಬೇರೆ ಇಲಾಖೆಗಳಲ್ಲಿ ಅತಿಥಿ/ ಹೊರಗುತ್ತಿಗೆ ಉಪನ್ಯಾಸಕರಿಗೆ ನೀಡುವ ಮಾನದಂಡದಂತೆಯೇ ವೇತನ ಪಾವತಿಸಲು ಕ್ರಮ ವಹಿಸಲಾಗುವುದು

---

**ಸಂಖ್ಯೆ: ನಅಇ 313 ಎಂಎನ್‌ಯು 2020**

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ